## ರಕ್ತದಲ್ಲಿ ಮನೋ ವಿಶ್ಲೇಷಣೆ!

'ಮನಸ್ಸಿನ ವರ್ತನೆಯನ್ನು ಮುಖ ಪ್ರತಿಬಿಂಬಿಸುತ್ತದೆ' ರಕ್ತ ಮನಸ್ಸಿಗೆ ಅಂಟಿದ ರೋಗವನ್ನೂ ತೋರಿಸುತ್ತದೆ ಎನ್ನುತ್ತಾರೆ ವಿಜ್ಞಾನಿಗಳು. ರಕ್ತ ಪರೀಕ್ಷೆ ಮೂಲಕ ಖಿನ್ನತೆಯನ್ನು ಪತ್ತೆ ಹಚ್ಚುವ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ್ದಾರೆ. ಇದಿನ್ನೂ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರದಲ್ಲಿ ಸಾರ್ವತ್ರಿಕವಾಗಿ ಪರಿಚಯಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಉದ್ದೇಶಿತ ಫಲಿತಾಂಶಕ್ಕಾಗಿ ಅಮೆರಿಕದ ಸಂಶೋಧಕರ ತಂಡ ಹನ್ನೊಂದು ಬಗೆಯ ವಿವಿಧ ರಸಾಯನಿಕಗಳನ್ನು ಸಿದ್ಧಪಡಿಸಿದ್ದು, ಅವುಗಳನ್ನು ಬಳಸಿ ಮನಸ್ಸಿನ ಹಲವು ರೋಗಗಗಳನ್ನು ಪತ್ತೆ ಹಚ್ಚಬಹುದು ಎಂಬ ಸಂಗತಿಯನ್ನು ಪ್ರಕಟಿಸಿದ್ದಾರೆ. ಅವರ ಊಹೆಯಂತೆ ಈಗಾಗಲೇ ಮನಸ್ಸಿನ ಖಿನ್ನತೆಯನ್ನು ಗುರುತಿಸುವಲ್ಲಿ ಆ ತಂಡ ಯಶಸ್ವಿಯಾಗಿದೆ.

ಪ್ರಸ್ತುತ ಖಿನ್ನತೆಯನ್ನು ಆಪ್ತಸಮಾಲೋಚನೆ ಮೂಲಕ ಅರಿಯಲಾಗುತ್ತಿದೆ. ಅದಕ್ಕಿಂತ ನಿಖರವಾಗಿ ರಕ್ತ ಪರೀಕ್ಷೆಯಿಂದ ಪತ್ತೆ ಹಚ್ಚಬಹುದು ಎಂಬುದು ಅಧ್ಯಯನ ತಂಡದ ಅಭಿಮತ. ಬಹುತೇಕ ಖಿನ್ನತೆ ಅನುವಂಶಿಕವಾಗಿದ್ದು, ರಕ್ತ ಪರೀಕ್ಷೆಯಿಂದ ಹದಿಹರೆಯದಲ್ಲಿಯೇ ಅದನ್ನು ಗುರುತಿಸಿ ಗುಣಪಡಿಸಬಹುದು ಎಂದು ಅವರು ಹೇಳಿದ್ದಾರೆ.

## ಮೂತ್ರಕೋಶದ ಕಲ್ಲಿಗೆ ಕಾರಣವೇನು?

ಮೂತ್ರ ಕೋಶದಲ್ಲಿ ಏಕೆ ಕಲ್ಲುಗಳು ಬೆಳೆಯುತ್ತವೆ? ಪ್ರಪಂಚದಾದ್ಯಂತ ಪ್ರತಿ ವರ್ಷವೂ ಲಕ್ಷಾಂತರ ಮಂದಿ ಮೂತ್ರಕೋಶದಲ್ಲಿ ಬೆಳೆಯುವ ಕಲ್ಲಿನಿಂದ ಬಳಲುತ್ತಾರೆ. ಇದರಿಂದ ತೀವ್ರ ನೋವಿನ ಯಾತನೆಯನ್ನೂ ಅನುಭವಿಸ ಬೇಕಾಗುತ್ತದೆ. ಇದಕ್ಕೆ ಖನಿಜಾಂಶಗಳ ಸಂಗ್ರಹವೇ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಅಧಿಕ ಉಪ್ಪು ಸೇವನೆ ಹಾಗೂ ಖನಿಜಯುಕ್ತ ನೀರು ಕುಡಿಯುವುದು ಒಂದೆಡೆ ಮೂತ್ರಕೋಶದಲ್ಲಿ ಕಲ್ಲನ್ನು ಸೃಷ್ಟಿಸುತ್ತದೆ. ಇದರ ಜೊತೆಗೆ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಕುಡಿಯದೇ ಇರುವುದು ಕೂಡ ಈ ಸಮಸ್ಯೆಯನ್ನು ಹುಟ್ಟು ಹಾಕುತ್ತದೆ ಎಂದಿದ್ದಾರೆ ಅವರು.

ಮೂತ್ರಕೋಶದಲ್ಲಿ ಕಲ್ಲಿನ ಬೆಳವಣಿಗೆಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿದ ವಾಷಿಂಗ್ಟನ್ ವಿಶ್ವವಿದ್ಯಾಲಯದ ವೈದ್ಯಕೀಯ ವಿಜ್ಞಾನಿಗಳು ತಮ್ಮ ಅಧ್ಯಯನಕ್ಕೆ ಇಲಿಗಳನ್ನು ಬಳಸಿದ್ದರು.

## ತಲೆ ಕೂದಲ ಕೃಷಿ!

ತಲೆ ಬೋಳಾಗಿದೆಯೇ? ಈ ಎಣ್ಣೆ ಹಚ್ಚಿ; ಎಂಬ ಜಾಹೀರಾತಿನಿಂದ ವಂಚನೆಗೆ ಒಳಗಾಗಿದ್ದೀರಾ? ಚಿಂತೆ ಬಿಡಿ. ಈಗ ತಂತ್ರಜ್ಞಾನದ ಮೂಲಕ 'ಬಾಲ್ಡಿ' ತಲೆಯಲ್ಲಿಯೂ ಕೂದಲನ್ನು ಚಿಗುರಿಸುವ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಿದ್ದೇವೆ ಎಂದು ಹೇಳುತ್ತಾರೆ ಜರ್ಮನ್‌ನ ವಿಜ್ಞಾನಿಗಳು.

ದೇಹದ ಪ್ರಮುಖ ಅಂಗಾಂಶದಿಂದ ಜೀವ ಕೋಶಗಳನ್ನು ಹೊರತೆಗೆದು, ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಿ ಅವುಗಳನ್ನು ಕೂದಲ ಕಿರುಚೀಲಗಳನ್ನಾಗಿ ತಯಾರಿಸುತ್ತಾರೆ. ನಂತರ ತಲೆಗೆ ಅಳವಡಿಸುತ್ತಾರೆ. ಸಂಶೋಧಕರು ಹೇಳುವ ಪ್ರಕಾರ 'ಜೀವಿಗಳ ರಕ್ತ ಅಥವಾ ಮೂಳೆಯಿಂದ ಯಾವುದೇ ಅಂಗಾಂಶಗಳನ್ನು ಅಭಿವೃದ್ಧಿಪಡಿಸಬಹುದು'. ಅಂತೆಯೇ ತಲೆ ಕೂದಲನ್ನು ಸಹ. ಈ ಪ್ರಯೋಗ ಶೇ.80ರಷ್ಟು ಗುಣಾತ್ಮಕ ಫಲಿತಾಂಶ ನೀಡಿದೆ.

-ಟಿಪ್ಸ್



ಕಾಡಿನ ಕತ್ತೆ: 'ನಿನ್ನ ಜೀವನ ಚೆನ್ನಾಗಿದೆಯೇ'?
ಊರಿನ ಕತ್ತೆ: 'ಏನು ಚೆನ್ನಾಗಿದೆಯೋ..! ನನ್ನ ಯಜಮಾನ ದುಡಿಸುತ್ತಲೇ ಇರುತ್ತಾನೆ'.
ಕಾಡಿನ ಕತ್ತೆ: 'ಹಾಗಾದರೆ ಕಾಡಿಗೆ ಬಂದು ಬಿಡು'.
ಊರಿನ ಕತ್ತೆ: 'ಇಲ್ಲಪ್ಪ, ನನ್ನ ಯಜಮಾನ ದುಡಿಸಬಹುದು. ಆದರೆ, ನನ್ನ ಮೇಲೆ ಬಹಳ ಪ್ರೀತಿ ಇಟ್ಟಿದ್ದಾನೆ'.
ಕಾಡಿನ ಕತ್ತೆ: 'ಅದೇನಪ್ಪ ಅಂತಹ ಪ್ರೀತಿ'?
ಊರಿನ ಕತ್ತೆ: 'ನನ್ನ ಯಜಮಾನ ತನ್ನ ಮಗಳನ್ನು ಪ್ರೀತಿಯಿಂದ ಕತ್ತೆ.. ಕತ್ತೆ.. ಅಂತ ಕರೀತಾನೇ ಇರ್ತಾನೆ. ಒಂದೊಂದು ಸಾರಿ ನಿನ್ನನ್ನು ಕತ್ತೆಗೆ ಕೊಟ್ಟು ಮದುವೆ ಮಾಡಿ ಬಿಡ್ತೀನಿ ಅಂತ ಹೇಳ್ತಾನೂ ಇರುತ್ತಾನೆ. ಅದಕ್ಕಾಗಿ ಕಾಯ್ತಾ ಇದೀನಿ'!

★★★

ಧರ್ಮ ಬೋಧಕ: 'ಇದೇನಿದು ಅನ್ಯಾಯ ದೇವರೆ? ನನ್ನಂತಹವನಿಗೆ ನರಕ, ಆ ಕುಡುಕ ಚಾಲಕನಿಗೆ ಸ್ವರ್ಗ'!
ದೇವರು: 'ಹೌದು. ನೀನು ಧರ್ಮ ಬೋಧಿಸುತ್ತಿರುವಾಗ ಜನರೆಲ್ಲ ನಿದ್ರೆ ಮಾಡುತ್ತಿದ್ದರು. ಈ ಕುಡುಕ ಚಾಲಕ ಬಸ್ ಓಡಿಸುತ್ತಿರುವಾಗ ಜನರೆಲ್ಲರನ್ನೂ ನನ್ನ ಪ್ರಾರ್ಥನೆ ಮಾಡುವಂತೆ ಮಾಡುತ್ತಿದ್ದ'!

★★★



ದೇವರು: 'ನನಗೆ ಸಾವಿರ ಕೋಟಿ ರೂಪಾಯಿ ಎಂದರೆ ಒಂದು ಪೈಸೆಗೆ ಸಮಾನ'.
ವ್ಯಕ್ತಿ: 'ಹಾಗಾದರೆ, ಲಕ್ಷ ವರ್ಷಗಳೆಂದರೆ'?
ದೇವರು: 'ಒಂದು ಕ್ಷಣ ಇದ್ದ ಹಾಗೆ'!
ವ್ಯಕ್ತಿ: 'ಹಾಗಾದರೆ, ನನಗೆ ಒಂದು ಪೈಸೆ ಕೊಡು'!
ದೇವರು: 'ದಯಮಾಡಿ ಒಂದು ಕ್ಷಣ ಕಾಯುತ್ತಿರು'!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ

ಪೊಲೀಸ್ ಇನ್ಸ್‌ಪೆಕ್ಟರ್: ನಿಮ್ಮ ಮಗನನ್ನು ಅಪಹರಣ ಮಾಡಿದ ವ್ಯಕ್ತಿ ಬಿಡುಗಡೆಗೆ ಕೇಳಿದ ಹಣವನ್ನು ಯಾಕೆ ಅಷ್ಟು ಬೇಗ ಕೊಟ್ಟಿರಿ?
ವ್ಯಕ್ತಿ: ನನ್ನ ಮಗನ ಶಾಲೆಗೆ 'ಅಡ್ಮಿಷನ್ ಫೀಸ್' ಕಟ್ಟಿದ್ದಕ್ಕಿಂತ ಅವನು ಕಡಿಮೆ ಕೇಳಿದನು ಸಾರ್!

★★★



ನಾಯಕ: ಕುರ್ಚಿಯ ಮೇಲೆ ನನಗೆ ಆಸೆ ಇಲ್ಲ ಎಂಬುದನ್ನು ಜನರಿಗೆ ತಿಳಿಸಬೇಕು ಕೂಡಲೇ ವ್ಯವಸ್ಥೆ ಮಾಡಿ.
ಆಪ್ತ ಕಾರ್ಯದರ್ಶಿ: ನಾನೇನು ಮಾಡಬೇಕೆಂದು ಹೇಳಿ ಸಾರ್.
ನಾಯಕ: ಇಂದಿನ ಸಭೆಗೆ ಹಾಜರಾಗುವವರೆಲ್ಲರನ್ನು ರಗ್ಗಿನ ಮೇಲೆ ಕೂರಿಸಿ. ನಾನೂ ಅದರ ಮೇಲೆ ಕುಳಿತು ಭಾಷಣ ಮಾಡುತ್ತೇನೆ!

ಸಂಗ್ರಹ: ಡಾ.ವಿ.ಪುಗಳೇಂದಿ, ಬಳ್ಳಾರಿ